ನಿರೀಕ್ಷಿಸಿದ ಮಟ್ಟಕ್ಕೆ ಆದರಿಂದ ಪ್ರಯೋಜನ ಲಭಿಸಲಿಲ್ಲವೆಂದು ಭಾವಿಸಿ", ಸ್ವಾಮಿ ಇಂಥ ಹೇಳಿಕೆಗಳು ಸರ್ಕಾರದಿಂದ ಬರಬೇಕು. ಆದರೆ ಆದಕ್ಕೆ ತದ್ವಿರುದ್ಧವಾದ ಉತ್ತರಗಳನ್ನು ಇಲ್ಲಿ ಕೊಟ್ಟಿದ್ದಾರೆ. ಉತ್ತರದಲ್ಲಿ ಕೊಟ್ಟಿರುವುದು ಒಂದಾದರೆ ಇಲ್ಲಿ ನಮಗೆ ಕೊಟ್ಟಿರುವುದೇ ಬೇರೆಯಾಗಿ ಆದಕ್ಕೆ ತದ್ವಿರುದ್ಧವಾದ ಉತ್ತರಗಳನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಪರಾಂಬರಿಸಬೇಕೆಂದು ಮತ್ತು ಸರಿಯಾದ ಉತ್ತರಗಳನ್ನು ಕೊಡಲು ತಾವು ಆವರಿಗೆ ಆದೇಶವನ್ನು ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ವಿಷಯ : - ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಎಂಡೋಸ್ಕೋಪ್ ಉಪಕರಣಗಳನ್ನು ಸರಬರಾಜು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 102(611)

ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು)

ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿಕ್ಟೋರಿಯಾ ಆಸ್ಪತ್ರೆಯಲ್ಲಿರುವ ಬಹಳಷ್ಟು ಎಂಡೋಸ್ಕೋಪ್‌ಗಳು ಕೆಟ್ಟು ಹೋಗಿದ್ದು, ದುರಸ್ತಿ ಮಾಡಲು ಸಾಧ್ಯವಿಲ್ಲದ ಪರಿಸ್ಥಿತಿಯಲ್ಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹೊಸ ಎಂಡೋಸ್ಕೋಪ್‌ಗಳನ್ನು ಸರಬರಾಜು ಮಾಡದೇ ಇರುವುದರಿಂದ ರೂ. 25.00ಲಕ್ಷದ ವೆಚ್ಚದ ವಿಡಿಯೋ ಎಂಡೋಸ್ಕೋಪಿ ಯೋಜನೆಯಲ್ಲಿ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಬೆಂಗಳೂರಿನಲ್ಲಿ ಜನಸಂಖ್ಯೆಯು 55 ಲಕ್ಷಕ್ಕೂ ಮೀರಿದ್ದು, ಕೆಲವು ಎಂಡೋಸ್ಕೋಪಿ ತಪಾಸಣೆಗಾಗಿ ಹೆಚ್ಚು ಹೆಚ್ಚು ರೋಗಿಗಳನ್ನು ಖಾಸಗಿ ಆಸ್ಪತ್ರೆಗಳಿಗೆ ಕಳುಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಸರ್ಕಾರವು ಎಲ್ಲರಿಗೂ ಒಳ್ಳೆಯ ಆರೋಗ್ಯ ನೀಡುವ ಹಿತದೃಷ್ಟಿಯಿಂದ ರೂ. 5-6 ಲಕ್ಷ ಬೆಲೆಯಾಗುವ ಹೊಸ ಎಂಡೋಸ್ಕೋಪಿಗಳನ್ನು ವಿಕ್ಟೋರಿಯಾ ಆಸ್ಪತ್ರೆಗೆ ಸರಬರಾಜು ಮಾಡಲು ಸರ್ಕಾರವು ತೆಗೆದುಕೊಂಡ ಕ್ರಮಗಳೇನು?

ಶ್ರೀ ಜಿ.ರಾಮಕೃಷ್ಣ

(ವೈದ್ಯಕೀಯ ಶಿಕ್ಷಣ ಸಚಿವರು)

ಬಂದಿದೆ, ಇರುವ 4 ಎಂಡೋಸ್ಕೋಪ್‌ಗಳಲ್ಲಿ 2 ದುರಸ್ತಿ ಮಾಡಲಾಗದಷ್ಟು ಕೆಟ್ಟು ಹೋಗಿದೆ. ಆದರೆ ಉಳಿದೆರಡು ಕಾರ್ಯ ನಿರ್ವಹಿಸುತ್ತಿದೆ.

ಬಾಕಿ ಉಳಿದಿರುವ ಸಿವಿಲ್ ಕಾಮಗಾರಿಗಳು ಪೂರ್ಣಗೊಂಡ ನಂತರ ಲಭ್ಯವಿರುವ ಎಂಡೋಸ್ಕೋಪ್‌ಗಳನ್ನು ಉಪಯೋಗಿಸಲಾಗುವುದು.

ಯಾವಾಗಲಾದರೂ ಒಮ್ಮೆ ವಿಶೇಷ ತಪಾಸಣೆಗಾಗಿ ಕೆಲವು ರೋಗಿಗಳನ್ನು ಎಲ್ಲಾ ಸೌಲಭ್ಯವನ್ನು ಒಳಗೊಂಡ ಗ್ಯಾಸ್ಟ್ರೋಎಂಟ್ರಾಲಾಜಿ ವಿಭಾಗವಿರುವ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಗೆ ಕಳುಹಿಸಲಾಗುತ್ತಿದೆ. ಇದಲ್ಲದೆ ಎಂಡೋಸ್ಕೋಪಿ ಸೌಲಭ್ಯವು ಜಯನಗರದ ಜನರಲ್

ಆಸ್ಪತ್ರೆಯಲ್ಲಿ ಲಭ್ಯವಿರುತ್ತದೆ. ಈ ಬಗ್ಗೆ ಯಾವುದೇ ರೋಗಿಗಳನ್ನು ಖಾಸಗಿ ಆಸ್ಪತ್ರೆಗಳಿಗೆ ಕಳುಹಿಸುತ್ತಿಲ್ಲ.

ಹೌದು, ಎಂಡೋಸ್ಕೋಪಿ ಬಗ್ಗೆ ದರ ಗುತ್ತಿಗೆ ತೀರ್ಮಾನವಾದ ಕೂಡಲೇ, ಆ ಉಪಕರಣವನ್ನು ವಿಕ್ಟೋರಿಯಾ ಆಸ್ಪತ್ರೆಗೆ ಸರಬರಾಜು ಮಾಡಲಾಗುವುದು.

ಶ್ರೀ ಎಂ.ವಿ.ವೆಂಕಟಪ್ಪ :- ಮಾನ್ಯ ಅಧ್ಯಕ್ಷರೇ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಎಂಡೋಸ್ಕೋಪ್ ಇದೆಯಲ್ಲ, ಅವುಗಳನ್ನು ಇನ್ನು ಎಷ್ಟು ತಿಂಗಳಲ್ಲಿ ಪ್ರಾರಂಭ ಮಾಡುತ್ತಾರೆ ಎಂಬುದನ್ನು ಮಾನ್ಯ ಸಚಿವರು ಹೇಳಬೇಕು.

ಶ್ರೀ ಎಸ್.ಎಂ.ಯಾಹ್ಯಾ(ವೈದ್ಯಕೀಯ ಶಿಕ್ಷಣ ಸಚಿವರ ಪರವಾಗಿ) :- ಈಗ ಎರಡು ಎಂಡೋಸ್ಕೋಪ್ ಎಕ್ವಿಪ್‌ಮೆಂಟ್ಸ್ ವರ್ಕ್ ಮಾಡುತ್ತಿವೆ. ಇನ್ನೂ ಎರಡು ಕೆಲಸ ಮಾಡುತ್ತಿಲ್ಲ. ನಾನು ಹೆಲ್ತ್ ಡಿಪಾರ್ಟ್‌ಮೆಂಟ್‌ಗೆ ಡೈರೆಕ್ಷನ್ ಕೊಡುತ್ತಿದ್ದೇನೆ; ಇನ್ನು ಎರಡು ತಿಂಗಳೊಳಗೆ ಅವುಗಳನ್ನು ಸರಿಮಾಡಿಕೊಡಬೇಕೆಂದು.

ಶ್ರೀ ಪಿ.ಜಿ.ಆರ್. ಸಿಂಧ್ಯ :- ಮಾನ್ಯ ಅಧ್ಯಕ್ಷರೇ, ಮಾನ್ಯ ಯಾಹ್ಯಾರವರು ಇದಕ್ಕೆ ಸಂಬಂಧಪಟ್ಟಿರತಕ್ಕಂಥ ಮಂತ್ರಿಗಳಲ್ಲ. ಅವರಿಗೆ ಅಂಕಿಅಂಶಗಳು ಗೊತ್ತಿಲ್ಲ. ಒಂದು ವರ್ಷದ ಕೆಳಗಡೆ ವೈದ್ಯಕೀಯ ಶಿಕ್ಷಣದ ಮೇಲೆ ನಾವು ಮಾತನಾಡತಕ್ಕಂಥ ಸಂದರ್ಭದಲ್ಲಿ ಆ ಮೆಷನರಿಗಳನ್ನು ಇನ್ನು ಮೂರು ತಿಂಗಳೊಳಗೆ ರಿಪೇರಿ ಮಾಡಿಸುತ್ತೇವೆಂದು ಆಶ್ವಾಸನೆಯನ್ನು ಈ ಸದನಕ್ಕೆ ಮಾನ್ಯ ಕೃಷ್ಣಾರವರು ಅಧ್ಯಕ್ಷ ಸ್ಥಾನದಲ್ಲಿ ಕುಳಿತಿದ್ದಾಗ ಭರವಸೆಯನ್ನು ಕೊಟ್ಟಿದ್ದರು. ಈಗ ತಮ್ಮ ಮೂಲಕವಾಗಿ ಅಧಿಕಾರಿಗಳು ಉತ್ತರವನ್ನು ಕೊಡಿಸಿದ್ದಾರೆ; ಇನ್ನು ಎರಡು ತಿಂಗಳಲ್ಲಿ ರಿಪೇರಿ ಮಾಡುತ್ತೇವೆಂದು ಹೇಳಿ. ಮಾನ್ಯ ವೆಂಕಟಪ್ಪನವರಿಗೆ ಈ ವಿಚಾರ ಗೊತ್ತಿಲ್ಲ ಅವರು ಅದನ್ನು ಒಪ್ಪಿಕೊಂಡು ಕುಳಿತುಕೊಳ್ಳುತ್ತಿದ್ದಾರೆ. ತಾವೇ ಕೇಳಿ, ಇದು ಹೇಗೆ ಸರಿ ಆಗುತ್ತದೆ ಎಂದು;

ಶ್ರೀ ಎಂ.ವಿ.ವೆಂಕಟಪ್ಪ :- ಮಾನ್ಯ ಅಧ್ಯಕ್ಷರೇ ನನಗೆ ವಿಚಾರ ಗೊತ್ತಿದೆ. ಪ್ರಶ್ನೆ ಕೇಳಿದ್ದಕ್ಕೆ ಮಾನ್ಯ ಮಂತ್ರಿಗಳು ಆಶ್ವಾಸನೆಯನ್ನು ಕೊಟ್ಟಮೇಲೆ ಇನ್ನೇನಿದೆ?

ಶ್ರೀ ಎಸ್.ಎಂ.ಯಾಹ್ಯಾ :- ಈಗತಾನೆ ಬೋರಿಂಗ್ ಆಸ್ಪತ್ರೆ ಮತ್ತು ಜಯನಗರ ಆಸ್ಪತ್ರೆಗಳಲ್ಲಿ ಎಂಡೋಸ್ಕೋಪಿಕ್ ಮತ್ತು ಅದಕ್ಕೆ ಸಂಬಂಧಪಟ್ಟ ಡಿಸೀಸ್ ಅಲ್ಸರ್ ಆಗಲಿ, ಗ್ಯಾಸ್ಟ್ರೊಎಂಟ್ರೈಟೀಸ್ ಆಗಲಿ ಅದಕ್ಕೆ ಬೇಕಾದ ಸ್ಪೆಷಲೈಸ್ ಎಕ್ವಿಪ್‌ಮೆಂಟ್‌ಗಳನ್ನೆಲ್ಲ ಇಟ್ಟಿದ್ದಾರೆ. ನಿಮಗೆ ಸಹಾಯವಾಗುವ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ನಾನು ವಿಚಾರ ಮಾಡಿ ಹೇಳಿದಮೇಲೆ ಆಯಿತು ಎಂದು ತಿಳಿದುಕೊಳ್ಳಿ. ನಾನು ಡಿಪಾರ್ಟ್‌ಮೆಂಟ್ ಆಫ್ ಹೆಲ್ತ್ ಮೂಲಕ ಇನ್ನು ಎರಡು ತಿಂಗಳಲ್ಲಿ ಸರಿ ಮಾಡುತ್ತೇವೆಂದು ಹೇಳಿದ್ದೇನೆ. ಈಗತಾನೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ 2500 ಎನ್‌ಮೇಟ್ಸ್ ತೆಗೆದಿದ್ದೇವೆ.

11.30 ಪಿ.ಎಂ.

ಶ್ರೀ ಪಿ.ಜಿ.ಆರ್ ಸಿಂಧ್ಯ :- ನನ್ನ ಪ್ರಶ್ನೆ ಏನೆಂದರೆ ಸದನಕ್ಕೆ ಮಾನ್ಯ ಮಂತ್ರಿಗಳು ಎರಡು ತಿಂಗಳಲ್ಲಿ ರಿಪೇರಿ ಮಾಡಿರುತ್ತೇವೆ ಎಂದು ಭರವಸೆ ಕೊಟ್ಟಿದ್ದಾರೆ. ಅದು ಏನಾಯಿತು?

ಶ್ರೀ ಎಸ್.ಎಂ.ಯಾಹ್ಯಾ :- ಅವು ನಾಲ್ಕು ಇದ್ದವು. ಕೆಲವು ಸಲ ಹಾಳಾಗುತ್ತಲೇ ಇರುತ್ತದೆ. ಅದಕ್ಕಾಗಿ ಎರಡು ತಿಂಗಳಲ್ಲಿ ಸರಿ ಮಾಡಿಕೊಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : – ಅವರ ಉತ್ತರಾನೂ ವಿಕ್ಟೋರಿಯಾ ಆಸ್ಪತ್ರೆ ಇದ್ದಹಾಗೆ ಇದೆ.

ವಿಷಯ : – ಶಿಕ್ಷಣ ಇಲಾಖೆಯಲ್ಲಿನ ಅನುಕಂಪದ ನೇಮಕಾತಿಗಳ ಸಂಖ್ಯೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 103(551)

ಶ್ರೀ ಡಿ. ಆರ್. ಪಾಟೀಲ್ (ಗದಗ್)

ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿಕ್ಷಣ ಇಲಾಖೆಯಲ್ಲಿ ಅನುಕಂಪದ ಆಧಾರದ ಮೇಲೆ ನೇಮಕವಾಗಬೇಕಾದ ಸಂಖ್ಯೆ ಎಷ್ಟು?

ಆ) ಅವರುಗಳನ್ನು ನೇಮಕ ಮಾಡುವಲ್ಲಿ ಇರುವ ತೊಂದರೆಗಳೇನು?

ಇ) ಅವರುಗಳನ್ನು ಎಷ್ಟು ಅವಧಿಯೊಳಗಾಗಿ ನೇಮಕ ಮಾಡಲಾಗುವುದು?

ಶ್ರೀಮತಿ ನಾಗಮ್ಮ ಸಿ.ಕೇಶವಮೂರ್ತಿ

(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು)

159

ಕೆಲವು ಅಭ್ಯರ್ಥಿಗಳು ಸಂಪೂರ್ಣ ಮಾಹಿತಿಯನ್ನು ನೀಡದಿರುವುದು ಹಾಗೂ ಅರ್ಹ ಹುದ್ದೆಗಳು ಖಾಲಿ ಇಲ್ಲದ ಕಾರಣ ತೊಂದರೆಯಾಗಿದೆ.

ಸರ್ಕಾರಿ ಆದೇಶ ಸಂಖ್ಯೆ : ಡಿಪಿಎಆರ್ 26 ಎಸ್‌ಸಿಎ ದಿನಾಂಕ 26-4-93ರ ಪ್ರಕಾರ ವಿಭಾಗಾಧಿಕಾರಿಗಳು ಅನುಕಂಪದ ಆಧಾರದ ಮೇಲೆ ನೇಮಕ ಮಾಡಲು ಕ್ರಮ ಕೈಗೊಳ್ಳುತ್ತಾರೆ.

ಶ್ರೀ ಡಿ.ಆರ್. ಪಾಟೀಲ್ : – ಉತ್ತರದಲ್ಲಿ ಕೆಲವು ಅಭ್ಯರ್ಥಿಗಳು ಸಂಪೂರ್ಣ ಮಾಹಿತಿ ಕೊಡದೆ ಇರುವುದರಿಂದ ನಿವೃತ್ತಿ ಮಾಡಲಿಕ್ಕೆ ಆಗಿಲ್ಲವೆಂದು ಹೇಳುತ್ತಾರೆ. ಎಷ್ಟು ಅಭ್ಯರ್ಥಿಗಳು ಸಂಪೂರ್ಣ ಮಾಹಿತಿ ಒದಗಿಸಿದ್ದಾರೆ? ಅಂತಹವರ ನಿವೃತ್ತಿಗೆ ಇನ್ನು ಎಷ್ಟು ಸಮಯ ಬೇಕು? ಇನ್ನುಮುಂದೆ ನಿವೃತ್ತಿಗಾಗಿ ಕಾಲಮಿತಿ ಹೇರುವ ವಿಚಾರ ಸರ್ಕಾರಕ್ಕೆ ಇದೆಯೇ?

ಶ್ರೀಮತಿ ನಾಗಮ್ಮ ಸಿ.ಕೇಶವಮೂರ್ತಿ : – ಮಾನ್ಯ ಸದಸ್ಯರು ಕೇಳಿದಂಥ ಪ್ರಶ್ನೆ ಶಿಕ್ಷಣ ಇಲಾಖೆ ಅಂತ ಕೇಳಿದ್ದೀರಿ. ನಾನು ನನ್ನ ಸಾರ್ವಜನಿಕ ಶಿಕ್ಷಣ ಇಲಾಖೆಗೆ ಸೀಮಿತವಾಗಿ ಉತ್ತರ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. 131 ಹುದ್ದೆಗಳಿಗೆ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಅಪ್ಲಿಕೇಶನ್‌ಗಳು ಪೆಂಡಿಂಗ್‌ನಲ್ಲಿವೆ. ಇದರಲ್ಲಿ ಪ್ರೌಢಶಾಲಾ ಶಿಕ್ಷಕರ ಹುದ್ದೆಗೆ 18 ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗೆ 18 ಪೆಂಡಿಂಗ್ ಇವೆ. ಗ್ರೂಪ್ 'ಡಿ' ನೌಕರರದ್ದು 40 ಪೆಂಡಿಂಗ್ ಇವೆ. ಇದು ಪೆಂಡಿಂಗ್ ಇರತಕ್ಕಂಥ ವಿಷಯ ಎಂದರೆ ಇವರು ಸರಿಯಾಗಿ ಮಾಹಿತಿ ಒದಗಿಸದೇ ಇರುವುದರಿಂದ ನಾವು ಇದನ್ನು ಪೆಂಡಿಂಗ್ ಇಟ್ಟಿದ್ದೇವೆ. ಇದಲ್ಲದೆ 55 ಸೆಕೆಂಡ್ ಡಿವಿಜನ್ ಪೋಸ್ಟ್‌ಗಳದ್ದು ಸಹ ಪೆಂಡಿಂಗ್ ಇವೆ. ಇದಕ್ಕೆ ಕಾರಣವೇನೆಂದರೆ, ನಮ್ಮ ಇಲಾಖೆಯಲ್ಲಿ ಸೆಕೆಂಡ್ ಡಿವಿಜನ್ ಪೋಸ್ಟ್‌ಗೆ ಹುದ್ದೆಗಳು ಯಾವುದೇ ಖಾಲಿ ಇಲ್ಲದೆ ಇರುವುದರಿಂದ ಅವರಿಗೆ ಕೊಡುವುದಕ್ಕೆ ಆಗಿಲ್ಲ. ನಿಮಗೆ ಗೊತ್ತಿರುವ ಹಾಗೆ ಸರ್ಕಾರದ ಆದೇಶದ ಪ್ರಕಾರ ಮೇ–ಜೂನ್‌ನಲ್ಲಿ 55 ಅಪ್ಲಿಕೇಶನ್ಸ್ ನಮ್ಮ ಇಲಾಖೆಗೆ ಬಂದಿದ್ದವು, ಅದನ್ನು ಡಿವಿಜನಲ್ ಕಮೀಷನರ್ ಅವರು ಇತ್ಯರ್ಥ ಮಾಡಬೇಕಾಗುತ್ತದೆ. ಹೊಸದಾಗಿ ಮೇ–ಜೂನ್‌ನಲ್ಲಿ